ಭಾವ ತಮಾಷೆ ಮಾಡಿದರು: "ಏನೋ ದೇವೂ? ಮಲೆನಾಡು ಹುಡುಗಿ ಕಣ್ಣು ಹಾಕಿದ್ದಾಳೆ... ಹುಷಾರಪ್ಪಾ! ನನಗೊಬ್ಬಳು ಬಲೆ ಬೀಸಿದ್ದಳು. ನಾನು ತಪ್ಪಿಸ್ಕೊಂಡು ನಿಮ್ಮಕ್ಕನ ಬಲೆಗೆ ಬಿದ್ದೆ..." ದೇವರಾಜ ಸಂಕೋಚದಿಂದಲೇ ಅಕ್ಕ ಭಾವನನ್ನು ಅನುಸರಿಸಿದ.

ಗೋಪಾಲ ನಾಯಕರು "ಬನ್ನಿ ಬನ್ನಿ" ಎಂದು ಆಹ್ವಾನಿಸುತ್ತಾ ಮಂಚದ ಮೇಲಿಂದ ಎದ್ದು, ಈಸಿಛೇರುಗಳನ್ನು ಸರಿಪಡಿಸಿದರು. ಉಷಾ ಓಡಿ ಬಂದು ಸುಮಿತ್ರಳ ಕೈಯಿಂದ ಕೊಡೆ ತೆಗೆದುಕೊಂಡು ಮಡಚಿ ಬೋರಲಾಗಿ ನಿಲ್ಲಿಸಿ ತೊಟ್ಟಿಕ್ಕುವ ಹನಿಗಳು ಅಂಗಳದಾಚೆಗೆ ಹರಿಯುವಂತೆ ಓರೆ ಮಾಡಿದಳು. 'ವೆಲ್‌ಕಂ ಶ್ರೀರಾಮ್, ವೆಲ್‌ಕಂ ಮಿಸೆಸ್ ಶ್ರೀರಾಮ್, ವೆಲ್‌ಕಂ ದೇವೂ...' ಅಂತ ಕಾರವಾರದ ಇಂಪಿನ ರಾಗದಲ್ಲಿ ಆಹ್ವಾನಿಸಿದಳು. 'ವೆಲ್‌ಕಂ ದೇವೂ' ಎಂಬುದು ವಿಶೇಷ ಆತ್ಮೀಯತೆಯಿಂದ ಕೂಡಿದ್ದರೂ ದೇವರಾಜ ಇವಳು ತನ್ನನ್ನು ಚುಚ್ಚುತ್ತಿರಬಹುದೆ ಎಂದು ಶಂಕಿಸಿದ. ಬೆಂಚಿನ ತುದಿಗೆ ಕುಳಿತ. ಉಷಾಗೆ ಸಂಭ್ರಮವೋ ಸಂಭ್ರಮ. ಸ್ವೀಟ್ಸ್ ಹಂಚಿಕೆಯಾಯಿತು. ಕಡು ಚಹಾ ಬಂತು. ದೇವರಾಜ ತಲೆ ತಗ್ಗಿಸಿಯೇ ಇದ್ದ. ಸುಮಿತ್ರಳಿಗೆ ಈಗ ನಿಜಕ್ಕೂ ತಮ್ಮನ ಮೇಲೆ ಸಿಟ್ಟು ಬಂದಿತ್ತು.

★★★

ದಟ್ಟವಾದ ಮರಳ ರಾಶಿ. ಸಣ್ಣ ರವೆಯಂತೆ. ಬಟ್ಟೆಗೆ ಅಂಟಿದರೆ ಒಮ್ಮೆ ಕೊಡವಿದರೆ ಸಾಕು ಉದುರಿ ಹೋಗುತ್ತದೆ. ಬಲಕ್ಕೆ ವಿಶಾಲವಾಗಿ ಮಲಗಿ ಭುಸುಗುಡುವ ಸರ್ಪದಂಥ ಸಮುದ್ರ, ಎದುರಿಗೆ ಗಿರಿ ಶ್ರೇಣಿ. ಬೆಟ್ಟದ ತುದಿ ಕಾಣಲೊಲ್ಲದು. ಮೋಡ ಮುಚ್ಚಿಹೋಗಿದೆ. ಅರ್ಧ ಬೆಟ್ಟ ಮಾತ್ರ ಕಾಣುವುದು. ದಟ್ಟವಾದ ಕಾಡು. ಮುಂದೆ ಅಕ್ಕ, ಭಾವ, ಉಷಾ ಚರ್ಚಿಸುತ್ತಾ ಹೋಗುತ್ತಿದ್ದಾರೆ. ತಾನೊಬ್ಬ ತಬ್ಬಲಿ ಭಾವನೆಯಿಂದ ಹತ್ತು ಹೆಜ್ಜೆ ಹಿಂದಿದ್ದಾನೆ. "ಅದು ನೋಡಿ.... ಹಾರ್ಬರ್.... ಬೆಳಕು ಸುತ್ತುತ್ತದಲ್ಲ; ಅದು ಹಡುಗುಗಳಿಗೆ ಸೂಚನೆ... ಕಾರವಾರದ ಆ ತುದಿ ಉಂಟಲ್ಲ? ಅದು ಸದಾಶಿವಗಡ... ಅಂಜು ದ್ವೀಪಕ್ಕೆ ಮುಂದಿನ ವಾರ ಹೋಗೋಣವಾ? ಗೋಕರ್ಣಕ್ಕೆ ಎಂದು ಹೋಗುವುದು? ಇಲ್ಲಿ ನೋಡಿ ಕನ್ನಡ ಸಿನಿಮಾಗಳೇ ಅಪರೂಪ... ಶಿರೀನ್ ಅಂತ ಟಾಕೀಸಿದೆ. ಹಿಂದೆ ನಿಂತರೆ ಬರೇ ಕಂಬಗಳು ಕಾಣಿಸ್ತವೆ. ಮುಂದೆ ಕುಳಿತರೆ ಕತ್ತೆತ್ತಿ ಕೂರಬೇಕು.... ಪೂರ್ಣಿಮಾ ಹೋಟೆಲಿನಲ್ಲಿ ತಿಂಡಿ ಚಂದ ಇರ್ತದೆ... ಶೆಟಗೇರಿ ಪ್ರಿನ್ಸಿಪಾಲ್ ಎಷ್ಟು ಒಳ್ಳೆಯವರು ಗೊತ್ತಾ? ನಮ್ಮ ಕಾಲೇಜಿಗೆ ಮುಂದಿನ ತಿಂಗಳು ಕ್ಯಾಂಪ್‌ಗೆ ಹೋಗ್ತೀವಿ. ಗೋವೆಗೆ ಬರ್ತೀರಾ? ರತ್ನಕ್ಕ ಈಗ ಪಂಜಿಂನಲ್ಲಿದ್ದಾಳೆ. ಓಲ್ಡ್ ಗೋವಾದಲ್ಲಿ ಚರ್ಚು ನೊಡಬೇಕು. ಬಿಣಗದಲ್ಲಿ ಸೋಡಾ ಫ್ಯಾಕ್ಟರಿ ಉಂಟಲ್ಲ, ಅದರ ಎದುರಿಗೆ ಮೊನ್ನೆ ಭಾರಿ ಆಕ್ಸಿಡೆಂಟ್ ಆಯ್ತು. ನಮ್ಮ ಫಿಸಿಕ್ಸ್ ಲೆಕ್ಚರರ್ ತೀರಿಕೊಂಡ್ರು ಪಾಪ!..." ಉಷಾಳ ಬಾಯಿಗೆ ಬಿಡುವೇ ಇಲ್ಲ. ತನ್ನ ಮಾತಿಗೆ ಯಾವ ಪ್ರತಿಕ್ರಿಯೆಯನ್ನೂ ನಿರೀಕ್ಷಿಸಳು.

ಕಾರವಾರವನ್ನು ಸುಮಿತ್ರಳಿಗೆ ವರ್ಣಿಸಿದ್ದೇ ವರ್ಣಿಸಿದ್ದು. ಕನ್ನಡ ನಾಡಿನ ಕಾಶ್ಮೀರ ಇದು ಗೊತ್ತಾ? ಅಂತ ದಿನಕ್ಕೆ ಹತ್ತು ಸಲ ಹೇಳಬೇಕು...ಆಗಲೇ ಅವಳಿಗೆ ಸಮಾಧಾನ. 'ಏನು ಕಾಶ್ಮೀರವೋ... ಬರೇ ಒದ್ದೆ ಬಟ್ಟೇಲಿ ತಿರುಗಾಡಬೇಕು. ಒಲೆ ಹತ್ತಿಸಬೇಕಾದ್ರೆ ಪ್ರಾಣ ಹೋಗ್ತದೆ...' ಸುಮಿತ್ರ ಗೊಣಗಿದ್ದಳು. "ನೋಡ್ತಿರಿ ಸುಮಿತ್ರಕ್ಕ, ಮಳೆಗಾಲ ಕಳೆದರೆ ಆಯಿತು. ಬೇಸಗೆಯಲ್ಲಿ ಎಂಥ ಚೆಂದ ಗೊತ್ತಾ? ಚಂಡ್ಯ ಅಂತ ಇಲ್ಲಿ ಊರುಂಟು. ಅಲ್ಲಿ ನಮ್ಮ ಅಂಕಲ್ ತೋಟವಿದೆ. ಹೋಗಿ ಸೀಯಾಳ ಕುಡಿದು ಬಂದರೆ ನೀವೇ ಹೇಳಲಿಕ್ಕೆ ಬರ್ತದೆ. ಕಾರವಾರ ಎಂಥ ಚೆಂದ ಅಂತ... ನಿತ್ಯ ಒಂದು ನಿಂಬೆ ಹಣ್ಣು ಉಪಯೋಗಿಸಿ, ಉಷ್ಣ ಕಡಿಮೆಯಾಗ್ತದೆ. ಬಂಗಡೆ